

ಬಿ.ಆರ್. ಸತ್ಯನಾರಾಯಣ
ಕಲೆ: ಸಂತೋಷ್ ಸಸಿಹಿತ್ಲು

# ಭೂತ ಮತ್ತು ಜೆರ್ರಿ

ಜೆರ್ರಿ ಇಲಿಯಿದ್ದ ಮನೆಯ ಪಕ್ಕ ಒಂದು ಭೂತವಿತ್ತು. ಅದಕ್ಕೆ ತಾನು ಬಹಳ ಬಲಶಾಲಿ ಎಂಬ ಅಹಂಕಾರವಿತ್ತು. ಬೇರೆಯವರನ್ನು ಹೆದರಿಸುವುದೆಂದರೆ ಅದಕ್ಕೆ ಬಹಳ ಖುಷಿ. ದಿನಕ್ಕೆ ಒಬ್ಬರಿಗಾದರೂ ಹೆದರಿಸಿದರೆ ಮಾತ್ರ ಅದಕ್ಕೆ ನಿದ್ದೆ ಬರುತ್ತಿತ್ತು. ಹುಲಿ, ಸಿಂಹ, ಆನೆ, ಮನುಷ್ಯ ಯಾರನ್ನೂ ಬಿಡದೆ ದಿನಕ್ಕೊಬ್ಬರನ್ನು ಹೆದರಿಸಿದ ಮೇಲೆಯೇ ಅದು ಆರಾಮವಾಗಿ ನಿದ್ದೆ ಮಾಡುತ್ತಿತ್ತು.

ಒಂದು ದಿನ ಭೂತಕ್ಕೆ ತುಂಬಾ ಜ್ವರ ಬಂದಿತ್ತು. ಎದ್ದು ನಡೆದಾಡುವುದಕ್ಕೂ ಕಷ್ಟವಾಗುತ್ತಿತ್ತು. ರಾತ್ರಿ ನಿದ್ದೆ ಬರಲಿಲ್ಲ. ಇಂದು ತಾನು ಯಾರನ್ನೂ ಹೆದರಿಸದೇ ಇರುವುದೇ ನಿದ್ದೆ ಬರದಿರುವುದಕ್ಕೆ ಕಾರಣ ಎಂದು ಭೂತಕ್ಕೆ ತಿಳಿಯಿತು. ಆದರೆ ನಡೆದಾಡಲೂ ಆಗುತ್ತಿಲ್ಲ. ಅದಕ್ಕೆ, ಪಕ್ಕದ ಮನೆಯಲ್ಲಿಯೇ ಇದ್ದ ಪುಟಾಣಿ ಜೆರ್ರಿಯನ್ನು ಹೆದರಿಸಿ ಬಂದು ನಿದ್ದೆ ಮಾಡೋಣ ಎಂದುಕೊಂಡು, ಜೆರ್ರಿ ಮನೆಗೆ ಹೋಯಿತು.

ಅಲ್ಲಿ, ಜೆರ್ರಿ ಬೆಚ್ಚಗೆ ಹೊದ್ದು ಹಾಯಾಗಿ ಮಲಗಿತ್ತು. ಭೂತ ಅದನ್ನು ಎಬ್ಬಿಸಿ, ಹಲ್ಲುಕಿಸಿದು ಹಾಂ ಹೂಂ ಎಂದು ಕೂಗುತ್ತಾ ಹೆದರಿಸಲು ಪ್ರಯತ್ನಿಸಿತು. ಗಾಬರಿಯಲ್ಲಿ ನಿದ್ದೆಯಿಂದ ಎದ್ದ ಜೆರ್ರಿ, ಭೂತವನ್ನು ನೋಡಿ 'ಅಯ್ಯೋ ನೀನಾ! ನಾನೆಲ್ಲೊ ಟಾಮ್ ಇರಬೇಕೆಂದು ಹೆದರಿಕೊಂಡೆ' ಎಂದು ಉದಾಸೀನವಾಗಿ ನುಡಿದು, ಮತ್ತೆ ಬೆಚ್ಚಗೆ ಹೊದ್ದು ಮಲಗಿತು.

ಭೂತದ ಅಹಂಕಾರ ಇಳಿದು ಹೋಗಿತ್ತು!

